# ಫಿಲಿಫ್ ವ್ಯಾನ್ ಲಿಯು



ಬೆಲ್ಜಿಯಂ ದೇಶದ ಫಿಲಿಫ್ ವ್ಯಾನ್ ಲಿಯು ಸಿನಿಮಾ ನಿರ್ದೇಶಕರಷ್ಟೇ ಅಲ್ಲ ಚಿತ್ರ ಕಥಾ ಲೇಖಕ ಮತ್ತು ಸಿನಿಮಾಟೋಗ್ರಾಫರ್ ಕೂಡ. ಹಲವಾರು ಚಿತ್ರಗಳಿಗೆ ಛಾಯಾಗ್ರಾಹಕರಾಗಿ ದುಡಿದ ಅನುಭವಿ. 'ದ ಡೇ ಗಾಡ್ ವಾಕ್ಡ್ ಅವೇ' (2009) ಅವರ ನಿರ್ದೇಶನದ ಮೊದಲ ಸಿನಿಮಾ. ಸಿರಿಯಾದ ಬೆಳವಣಿಗೆಗಳ ಬಗ್ಗೆ ಅವರಿಗೆ ಇರುವ ಆಸಕ್ತಿಯ ಪ್ರತೀಕವೇ 'ಇನ್‌ಸಿರಿಯೇಟೆಡ್' ಚಿತ್ರ. ಈ ಚಿತ್ರ ಅವರಿಗೆ ಜಗತ್ತಿನ ಉದ್ದಗಲದಲ್ಲಿ ಅಪಾರ ಹೆಸರು ಮತ್ತು ಹಲವು ಪ್ರಶಸ್ತಿಗಳನ್ನು ತಂದುಕೊಟ್ಟಿದೆ.

ಡಮಾಸ್ಕಸ್ ಬಾಂಬ್ ದಾಳಿಗಳಿಂದ ಮುಕ್ಕಾಗಿದೆ. ಕಟ್ಟಡಗಳು ಅಸ್ಥಿಪಂಜರಗಳಂತಾಗಿವೆ. ಅಲ್ಲಿ ನೀರವ ಮೌನವಿದೆ. ಆಗಾಗ ಬೀಳುವ ಬಾಂಬುಗಳು, ಮೊರೆಯುವ ಮೆಷಿನ್ ಗನ್‌ಗಳ ಸದ್ದು. ನಂತರ ಕೇಳಿಬರುವ ಜನರ ಆಕ್ರಂದನಗಳನ್ನು ಈ ಚಿತ್ರಗಳಲ್ಲಿ ಕಾಣಬಹುದು. ಮಕ್ಕಳನ್ನು ಮಾನವ ಬಾಂಬ್‌ಗಳಂತೆ ಬಳಸಿಕೊಳ್ಳುವ ಐಸಿಸ್ ಉಗ್ರರ ಹೀನ ಕೃತ್ಯಗಳನ್ನು ಕ್ರೈಸ್ ಫ್ರಂ ಸಿರಿಯಾ ಕಟ್ಟಿಕೊಡುತ್ತದೆ. ಸಿರಿಯಾದ ವಿದ್ಯಮಾನಗಳಿಗೆ ಅಲ್ಲಿನ ಸಾಹಿತ್ಯ, ಕಲೆ ಇನ್ನಿತರ ಮಾಧ್ಯಮಗಳು ಹೇಗೆ ಸ್ಪಂದಿಸಿವೆ ಎನ್ನುವುದು ಗೊತ್ತಾಗಲು ಇನ್ನಷ್ಟು ಸಮಯ ಬೇಕಾಗಬಹುದು.

ಸಿರಿಯಾದಲ್ಲಿ ಸಿನಿಮಾ ಜನಪ್ರಿಯ ಮಾಧ್ಯಮ ಅಲ್ಲ. 1928ರಲ್ಲೇ ಸಿರಿಯಾದ ಮೊದಲ ಮೂಕಿ ಸಿನಿಮಾ ಬಿಡುಗಡೆ ಆಯಿತು. 1947ರಲ್ಲಿ ಮೊದಲ ಟಾಕಿ ಸಿನಿಮಾ ಬಂತು. ಆ ದೇಶದಲ್ಲಿ ವರ್ಷಕ್ಕೆ 3–4 ಸಿನಿಮಾಗಳು ಅಂದರೆ ಸಾಕ್ಷ್ಯಚಿತ್ರಗಳು ತಯಾರಾಗುತ್ತವೆ. ಕಥಾ ಚಿತ್ರಗಳು ವಿರಳ. ಇಡೀ ದೇಶದಲ್ಲಿ ಚಿತ್ರಮಂದಿರಗಳ ಸಂಖ್ಯೆಯೂ ಕಡಿಮೆ.

2011ರ ಮಾರ್ಚ್‌ನಲ್ಲಿ ಐಸಿಸ್ ಉಗ್ರರ ಅಟ್ಟಹಾಸ ಶುರುವಾಯಿತು. ಅದರ ಬೆನ್ನಲೇ ಜನಾಂಗೀಯ ಸಂಘರ್ಷ. ಇದುವರೆಗೆ ಹತ್ತು ಲಕ್ಷಕ್ಕೂ ಹೆಚ್ಚು ಜನರ ಹತ್ಯೆ ಆಗಿದೆ. ಐದು ಲಕ್ಷ ಮಕ್ಕಳು ಮೃತಪಟ್ಟಿದ್ದಾರೆ. ಐಸಿಸ್ ಉಗ್ರರ ಕೃತ್ಯಗಳನ್ನು ತಡೆಯುವ ನಿಟ್ಟಿನಲ್ಲಿ ಅಧ್ಯಕ್ಷ ಬಷರ್ ಅಲ್ ಅಸದ್ ತಾಳಿದ ನಿಲುವು, ಕೈಕೊಂಡ ಅತಿರೇಕದ ಕ್ರಮಗಳಿಂದ ಪರಿಸ್ಥಿತಿ ಗಂಭೀರವಾಯಿತು. ರಾಸಾಯನಿಕ ಅಸ್ತ್ರಗಳ ಬಳಕೆ ವಿರೋಧಿಸಿ ಅಮೆರಿಕಾ ನಡೆಸಿದ ಬಾಂಬ್ ದಾಳಿಗಳಿಂದ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿತು.

ಈ ಮೇಲಿನ ಮೂರೂ ಡಾಕ್ಯುಮೆಂಟರಿ ಚಿತ್ರಗಳೇ ಅಲ್ಲದೆ ಭಯ, ಆತಂಕಗಳ ನಡುವೆ ಬದುಕುತ್ತಿರುವ ಸಿರಿಯಾ ಕುಟುಂಬಗಳು ಅನುಭವಿಸಿದ ಸಂಕಟ, ತಳಮಳಗಳ ಮೇಲೆ ಬೆಳಕು ಚೆಲ್ಲುವ 'ಇನ್‌ಸಿರಿಯೇಟೆಡ್' (ಇನ್ ಸಿರಿಯಾ) ಸಿನಿಮಾ 2017ರಲ್ಲಿ ನಿರ್ಮಾಣಗೊಂಡು ಜಗತ್ತಿನ ಹಲವೆಡೆ ಪ್ರದರ್ಶನವಾಗಿದೆ.

ಅರೇಬಿಕ್ ಭಾಷೆಯ ಈ ಸಿನಿಮಾದ ನಿರ್ದೇಶಕರು ಬೆಲ್ಜಿಯಂನ ಫಿಲಿಫ್ ವ್ಯಾನ್ ಲಿಯು.